ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಹೇಳಿದ್ದಾರೆ ಮತ್ತೆ ಮತ್ತೆ ಕೇಳುತ್ತೀರಲ್ಲಾ? ಶ್ರೀ ಸುನಿಲ್ ವಿ. ಹೆಗಡೆಯವರು ಮಾತನಾಡುವುದು.

10. ವಿಷಯ : ಜಾಗೃತ ಸಮಿತಿಗಳಿಗೆ ವಿಧಾನ ಪರಿಷತ್ತಿಗೆ ಸದಸ್ಯರನ್ನು ಸಹ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ.

ಶ್ರೀ ಸುನಿಲ್ ವಿ. ಹೆಗಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಹಿಂದಿನ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ವಸತಿ ಸಚಿವರು ಜಾಗೃತ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಚರ್ಚೆಯಾಗಿತ್ತು. ಸರ್ಕಾರ ಸನ್ಮಾನ್ಯ ಸುರೇಶ್ ಕುಮಾರ್‌ರವರು, ಕಾನೂನು ಮಂತ್ರಿಗಳು, ಇದಕ್ಕೊಂದು ಉತ್ತರವನ್ನು ಕೊಟ್ಟು ಈಗ ಯಾವ ರೀತಿಯಲ್ಲಿದೆಯೋ ಅದನ್ನೇ ಮುಂದುವರೆಸುತ್ತೇವೆ. ಯಾವುದೇ ಕಾರಣಕ್ಕೂ ಸಹ ಅಧ್ಯಕ್ಷರನ್ನಾಗಿ ಮಾಡುವುದಿಲ್ಲವೆಂದು ಹೇಳಿದ್ದರು. ಅದರೆ ಮಾನ್ಯ ವಸತಿ ಸಚಿವರು ನಿನ್ನೆ ವಿಧಾನ ಪರಿಷತ್ತಿನಲ್ಲಿ ಮತ್ತೊಮ್ಮೆ ಈ ವಿಷಯವನ್ನು ಕೆದಕಿದ್ದಾರೆ. ಮತ್ತೆ ಅಲ್ಲಿ ಏನು ಹೇಳಿದ್ದಾರೆಂದರೆ ಈ ಯೋಜನೆಗಳ ದುರಪಯೋಗವಾಗದಂತೆ ತಡೆಯಲು ಹಾಗೂ ಆಯ್ಕೆ ಪ್ರಕ್ರಿಯೆ ಪಾರದರ್ಶಕತೆಯನ್ನು ಕಾಪಾಡಲು ಪರಿಷತ್ತಿನ ಸದಸ್ಯರನ್ನು ಸಹ ಅಧ್ಯಕ್ಷರನ್ನಾಗಿ ಮಾಡುವ ಕುರಿತು ಆದೇಶ ಹೊರಡಿಸುತ್ತೇನೆ ಎಂದು ಹೇಳಿದ್ದಾರೆ. ನಾನು ಏನು ಕೇಳುತ್ತಿದ್ದೇನೆಂದರೆ, ನಾವೆಲ್ಲಾ ವಿಧಾನಸಭೆಯ ಸದಸ್ಯರು 225 ಜನ ಇದ್ದೇವೆ. ಇವರು ಹೇಳಿದ್ದು ನೋಡಿದರೆ, ಜಾಗೃತ ಸಮಿತಿಯಲ್ಲಿ ನಾವೆಲ್ಲಾ ದುರುಪಯೋಗ ಮಾಡುತ್ತಿದ್ದೇವೆ. ಪಾರದರ್ಶಕವಾಗಿ ನೀವು ಕೊಡುತ್ತಿಲ್ಲ. ಎನ್ನುವಂಥದ್ದನ್ನು ವಸತಿ ಸಚಿವರೇ ನೇರವಾಗಿ ವಿಧಾನ ಪರಿಷತಿನಲ್ಲಿ ಹೇಳಿದ್ದಾರೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಎರಡನೆಯದಾಗಿ, ವಸತಿ ಸಚಿವರಿಗೆ ವಿಧಾನ ಪರಿಷತ್ತಿನ ಸದಸ್ಯರ ಮೇಲೆ ಏಕೆ ಮೋಹ ಎಂದರೆ, ಅವರೂ ಸಹ ವಿಧಾನ ಪರಿಷತ್ತಿನ ಸದಸ್ಯರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಇಲ್ಲಿ ನಮಗೆ ನ್ಯಾಯ ಒದಗಿಸುತ್ತಾರೆ ಎನ್ನುವಂತಹ ಭರವಸೆ ನಮಗಿಲ್ಲ ಮತ್ತು ಒಂದು ಸಲ House ನಲ್ಲಿ ಇದೆ ಬಗ್ಗೆ ಸರ್ಕಾರ ಉತ್ತರ ಕೊಟ್ಟು ನಂತರ, ಪದೇ ಪದೇ ಈ ವಿಷಯವನ್ನು

ವಸತಿ ಸಚಿವರು ಪ್ರಸ್ತಾಪ ಮಾಡಿದರೆ ಮತ್ತೆ ನಮ್ಮಿಂದ ದುರುಪಯೋಗವಾಗುತ್ತದೆ ಎಂದು ಹೇಳಿದರೆ MLA ಗಳದ್ದು ಹಕ್ಕುಚ್ಯುತಿ ಆಗುತ್ತದೆ. ಖಂಡಿತವಾಗಿಯೂ ಈ ರೀತಿಯ ಒಂದು ಅವಕಾಶವನ್ನು ಕೊಡಬಾರದು ಮತ್ತೆ ಯಾವುದೇ ಕಾರಣದಿಂದ ಇದಕ್ಕೆ ವಸತಿ ಸಚಿವರು ಮತ್ತೊಮ್ಮೆ ಈ ಬಗ್ಗೆ repeat ಮಾಡಬಾರದು. ಈ ಬಗ್ಗೆ ಸರ್ಕಾರ ಸಂಪೂರ್ಣವಾದ ಸ್ಪಷ್ಟೀಕರಣ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ವಸತಿ ಸಚಿವರು ವಿಧಾನ ಪರಿಷತಿನಲ್ಲಿ ಮಾಡಿರುವ ಹೇಳಿಕೆ ಕುರಿತು ಇಲ್ಲಿ ಚರ್ಚೆಯಾಗುತ್ತಿದೆ. ನಾನು ವಸತಿ ಸಚಿವರಿಂದಲೇ ಇವರು ಶೂನ್ಯವೇಳೆಯಲ್ಲಿ ಮಾಡಿರುವ ಪ್ರಸ್ತಾವಕ್ಕೆ ನಾನು ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಈ ಬಗ್ಗೆ ಎರಡು ಬಾರಿ ಚರ್ಚೆಯಾಗಿದೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಹೌದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮತ್ತೆ ಪದೇ ಪದೇ ಏಕೆ ಈ ರೀತಿ ಮಾಡುತ್ತಿದ್ದಾರೆ ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಉತ್ತರ ಕೊಟ್ಟಾಗ ನಾವು decision ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮೊದಲು ಅದರ ಬಗ್ಗೆ ಉತ್ತರ ಕೊಡಿಸಿ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರು ಮಾತನಾಡುವುದು.